ಅವರಿಗೆ ನೋಟೀಸ್ ಮೇಲೆ ನೋಟೀಸ್ ಕೊಟ್ಟು, ಇದು ಗ್ರಾ ೃಂಟ್ ಇನ್ ಏಡ್ ಸಂಸ್ಥೆ ಆಗಿದ್ದರಿಂದ ಗ್ರಾ ೃಂಟ್ ಕೂಡ ಸ್ಟಾಪ್ ಮಾಡಿದ್ದೆವು. ಆ ನಂತರ ಅಲ್ಲಿರತಕ್ಕಂತಹ ಬೇರೆ ನೌಕರರು, ಉಪಾಧ್ಯಾಯರು ಅವರೆಲ್ಲಾ ರೆಪ್ರಸೆಂಟೇಷನ್ ಮಾಡಿ ನಾವು ಏನು ತಪ್ಪು ಮಾಡಿದ್ದೇವೆ, ನಮಗೆ ಏಕೆ ಗ್ರಾ ೃಂಟ್ ನಿಲ್ಲಿಸುತ್ತೀರಿ ಎಂದು ಹೇಳಿದ ಮೇಲೆ ಅದನ್ನು ರೆಸ್ಟೋರ್ ಮಾಡಿ, ಶ್ರೀ ಪಂಚಾಕ್ಷರಿಸ್ವಾಮಿ ಮತ್ತು ಶ್ರೀಮತಿ ರತ್ನಮ್ಮನವರಿಗೆ ಈ ಇಬ್ಬರಿಗೆ ಸಂಬಳ ಗ್ರಾ ೃಂಟ್ ನಿಲ್ಲಿಸಿದ್ದೇವೆ. ಈಗಾಗಲೇ ಶ್ರೀಮತಿ ರತ್ನಮ್ಮನವರು ಒಂದು ಅಪೀಲ್ ಮಾಡಿಕೊಂಡಿದ್ದಾರೆ. ಕಾಲೇಜು ಶಿಕ್ಷಣ ಕಾಯಿದೆ 1983ರ ಕಲಂ 130ರ ಪ್ರಕಾರ ಕಮೀಷನರ್ ಹತ್ತಿರ ಅಪೀಲ್ ಮಾಡಿಕೊಂಡಿದ್ದಾರೆ. ಈ ಬಗ್ಗೆ ವಿಚಾರಣೆ ನಡೆಯುತ್ತಿದೆ, ವಿಚಾರಣೆ ಮುಗಿದಮೇಲೆ ಈ ಸಮಸ್ಯೆ ಬಗೆಹರಿಯುತ್ತದೆ ಆ ಸಂಸ್ಥೆಯವರು ಯಾವುದೇ ರೀತಿಯಲ್ಲಿ ಸರ್ಕಾರದ ಕಾಯಿದೆಗಳನ್ನು ಫಾಲೋ ಮಾಡುತ್ತಿಲ್ಲ ಮತ್ತು ಅಲ್ಲಿಯ ಆಡಳಿತ ಮಂಡಳಿ ಬೇರೆ ರೀತಿ ಮಾಡುತ್ತಾರೆಂದು ಹೇಳಿದ್ದೀರಿ, ಅದಕ್ಕೆ ನಾನು ಆಯುಕ್ತರ ಹಂತದಲ್ಲಿ ವಿಚಾರಣೆ ಮಾಡಿಸುತ್ತೇನೆ.

(ಉ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಕಡಿಮೆಯಾಗುತ್ತಿರುವುದರ ಬಗ್ಗೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ):– ಮಾನ್ಯ ಅಧ್ಯಕ್ಷರೆ, ಈ ಶೂನ್ಯವೇಳೆಯಲ್ಲಿ ನಾನು ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುತ್ತಿದ್ದೇನೆ. ಮಾನ್ಯ ರಂಗನಾಥ್‌ರವರೆ, ನನಗೆ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿರುವುದರಿಂದ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಈ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಉತ್ತರ ಕನ್ನಡ ಜಿಲ್ಲೆ ದಾಖಲೆ ಪ್ರಕಾರ ಶೇಕಡ 80ರಷ್ಟು ಅರಣ್ಯ ಇರುವ ಜಿಲ್ಲೆ. ನೀವು ಒಮ್ಮೆ ನಮ್ಮ ಜಿಲ್ಲೆಗೆ ಬರಬೇಕು. ನಮ್ಮದು ಬಹಳ ಸಂಪದ್ಭರಿತವಾದ ಜಿಲ್ಲೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಸಮೃದ್ಧವಾದ ಅರಣ್ಯ ಇದೆ. ನಮ್ಮ ಜಿಲ್ಲೆಯಲ್ಲಿ ಬೇರೆ ಬೇರೆ ಯೋಜನೆಗಳಿಂದ ಅರಣ್ಯದ ಮುಳುಗಡೆ ಆಗಿದೆ ಅರಣ್ಯದ ಕಣಾವು ಆಗಿದೆ. ಹಾಗಾಗಿ ಅರಣ್ಯದ ಪ್ರಮಾಣ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಈ ಆತಂಕ ನಮ್ಮ ಜಿಲ್ಲೆಯ ಜನರಿಗೆ ಇದೆ. ಅದು ಬೇರೆ ವಿಚಾರ. ನಾನು ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತರುವ ವಿಷಯ ಏನೆಂದರೆ, ನಮ್ಮ ಜಿಲ್ಲೆಯಲ್ಲಿ ಅರಣ್ಯ ಲೂಟಿ ಅವ್ಯಾಹತವಾಗಿ, ನಿರಂತರವಾಗಿ ನಡೆಯುತ್ತಿದೆ. ನಿನ್ನೆ ಹೀಗೆ ನಾಗರಹೊಳೆ ಬಗ್ಗೆ ಬೇರೆ ಬೇರೆ ವಿಷಯ ಪ್ರಸ್ತಾಪ ಆಯಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಗಲು ಲೂಟಿ ರಾತ್ರಿ ಲೂಟಿ ಇದು ನಿರಂತರವಾಗಿ ನಡೆಯುತ್ತಿದೆ. ಮಾನ್ಯ ಅರಣ್ಯ ಸಚಿವರು ನಮ್ಮ ಜಿಲ್ಲೆಗೆ 2-3 ದಿನಗಳ ಕಾಲ ಪ್ರವಾಸ ಬಂದಿದ್ದರು. ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ಹೀಗೆ ಅರಣ್ಯ ಲೂಟಿ ನಡೆಯುತ್ತಿದೆ ಎಂದು ಅವರ ಗಮನಕ್ಕೆ ಬಂದಿದೆ. ಇಲ್ಲಿ ಶ್ರೀಗಂಧ, ಬೀಟೆ, ಸಾಗುವಾನಿ ಬೇರೆ ಬೇರೆ ಜಾತಿಯ ಗಿಡಗಳು ಏನಿದೆ ಇವೆಲ್ಲವನ್ನು ಸಹ ಹಗಲಿನಲ್ಲಿಯೇ ಕಡಿದು ಅರಣ್ಯಗಳ್ಳರು ಲೂಟಿ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಅನೇಕ ಸಂದರ್ಭಗಳಲ್ಲಿ ಶಾಮೀಲಾಗಿದ್ದಾರೆ. ಬೇರೆ ಬೇರೆ ಕೇಸ್ ಉದಾಹರಿಸುತ್ತಾ ಹೋದರೆ ಸಮಯ ಬೇಕಾಗುತ್ತದೆ. ಮಾನ್ಯ ಸಚಿವರಿಗೆ ಗೊತ್ತಿದೆ, ನನ್ನದೇ ಕ್ಷೇತ್ರದಲ್ಲಿ ರಾಮನಗೊಳ್ಳಿ ಎನ್ನುವ ಅರಣ್ಯ ವಲಯ ಅಧಿಕಾರಿಗಳ ಮೇಲೆ ಅರಣ್ಯಗಳ್ಳರು ಹಲ್ಲೆ ಮಾಡಿದರು. ಅವರು ಕಳ್ಳಮಾಲು ಹಿಡಿಯುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆ ನಡೆಯಿತು. ಹಲ್ಲೆಯಾಗಿ ಕೈ ಮುರಿದು ಆಸ್ಪತ್ರೆಗೆ ದಾಖಲಾಗಿ ಅನೇಕ ಗಂಭೀರವಾದ ಸಮಸ್ಯೆಗಳು ಎದುರು ಆದುವು. ಇಂತಹ ಸಂದರ್ಭದಲ್ಲಿ ಅರಣ್ಯ ಇಲಾಖೆಯವರು

ಪೋಲೀಸ್‌ನವರಿಗೆ ಕಂಪ್ಲೇಂಟ್ ಕೊಟ್ಟರೂ ಅವರನ್ನು ಹಿಡಿಯಲಿಲ್ಲ. ಆದರೆ ಅವರ ಜೊತೆ ಸೇರಿ ರಕ್ಷಣೆ ಕೊಡುವ ಕೆಲಸವಾಯಿತು ಎನ್ನುವ ಆರೋಪ ಇದೆ. ಈ ಹಿನ್ನೆಲೆಯಲ್ಲಿ ನಾನು ಪ್ರಮುಖವಾಗಿ ಹೇಳುವುದೇನೆಂದರೆ, ಕಾನೂನು ಬಲಪಡಿಸಬೇಕು ಇದು ಒಂದು, ಇನ್ನೊಂದು ಅರಣ್ಯ ಕಳ್ಳರಿಗೆ ಶಿಕ್ಷೆ ಕೊಡುವುದಕ್ಕೆ ಬೇಕಾಗುವ ಕಾನೂನು ಬಲಪಡಿಸಬೇಕು. ಸರ್ಕಾರ ಅವರ ಆರ್‌ಎಫ್‌ಓ ವಲಯದಲ್ಲಿ ಎಸಿಎಫ್ ಬೇರೆ ಬೇರೆ ಡಿಎಫ್‌ಓ ಲೆವಲ್‌ನಲ್ಲಿ ಬೇಕಾಗಿರುವ ಕಾನೂನು ಬಲಪಡಿಸಬೇಕು. ಎರಡನೆಯದು ಸಿಬ್ಬಂದಿಯನ್ನು ಬಲಪಡಿಸಬೇಕು. ಇವತ್ತು ಗಾರ್ಡ್ ಪಾರೆಸ್ಟ್ ಲೆವಲ್‌ನಲ್ಲಿ ರಿಕ್ರ್ಯೂಟ್‌ಮೆಂಟ್ ಆಗುತ್ತಿಲ್ಲ.

1.20 ಪಿಎಂ.

ಅದರ ಮೇಲೆ ಕನ್ಸರ್ವೇಟರ್, ಅವರ ಮೇಲೆ ಅದು ಎಷ್ಟು ಜನ ಕನ್ಸರ್ವೆಟರ್ಸಗಳೋ, ಪಿ.ಸಿ.ಸಿ.ಎಫ್.ಗಳೋ, ಈ ಲೆವಲ್‌ನಲ್ಲಿ, ಅರಣ್ಯ ಭವನದಲ್ಲಿ ಅಧಿಕಾರಿಗಳು ಜಾಸ್ತಿ ಆಗುತ್ತಿದ್ದಾರೆಯೇ ಹೊರತು ಅರಣ್ಯ ಕಾಯುವಂತಹವರ ಸಂಖ್ಯೆ ಹೆಚ್ಚಾಗುತ್ತಿಲ್ಲ. ಮೂರನೆಯದಾಗಿ ಅವರಿಗೆ ಬೇಕಾಗಿರುವ ಆಗತ್ಯ ಶಸ್ತ್ರಾಸ್ತ್ರಗಳನ್ನು ಪೂರೈಸಿಕೊಡಬೇಕಾಗಿದೆ. ಕೊನೆಯದಾಗಿ ಸರ್ಕಾರವೂ ಕೂಡ ಯಾವುದೇ ಸಂದರ್ಭದಲ್ಲಿ ಅರಣ್ಯ ಅಧಿಕಾರಿಗಳನ್ನು ಡಿಮಾರಲೈಸ್ ಮಾಡದೆ ಅವರ ರಕ್ಷಣೆಗೆ ಬೇಕಾಗಿರುವಂಥ ಪ್ರಯತ್ನಗಳು ಆಗಬೇಕು. ಎಲ್ಲಿ ಅರಣ್ಯಾಧಿಕಾರಿಗಳೇ ಶಾಮೀಲಾಗಿದ್ದಾರೋ ಅಲ್ಲಿ ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವಂಥ ಪ್ರಯತ್ನವಾಗಬೇಕು. ಇದು ನನ್ನ ಕ್ಷೇತ್ರದಲ್ಲಿ ಆಗಿರುವಂಥ ಘಟನೆಯ ಹಿನ್ನೆಲೆಯಲ್ಲಿ ಹೇಳುತ್ತಾ ಇದ್ದೇನೆ. ನಿಷ್ಪಾವಂತ ಅಧಿಕಾರಿಗಳಿಗೂ ರಕ್ಷಣೆ ಆಗಬೇಕು ಮತ್ತು ಆ ಮೂಲಕ ಅರಣ್ಯದ ರಕ್ಷಣೆ ಕೆಲಸ ಕೂಡ ಆಗಬೇಕು. ಆ ರೀತಿಯಲ್ಲಿ ನೋಡಿಕೊಂಡು, ವಿಶೇಷವಾಗಿ ಯಾರು ತಪ್ಪಿತಸ್ಥ ಅಧಿಕಾರಿಗಳಿದ್ದಾರೋ ಅವರ ಮೇಲೆ ಎಂದು ನಿರ್ದಾಕ್ಷಿಣ್ಯವಾದಂಥ ಕ್ರಮ ಆಗಬೇಕು. ನಾನು ನನ್ನ ಕ್ಷೇತ್ರದ ರಾಮನಗೊಳ್ಳಿ ಅರಣ್ಯ ವಲಯಾಧಿಕಾರಿಗಳ ಮೇಲೆ ಏನು ಹಲ್ಲೆಯಾಗಿದೆ, ಇದರಿಂದಾಗಿ ನಮ್ಮ ಜಿಲ್ಲೆಯಲ್ಲಿ ಅರಣ್ಯ ಲೂಟಿ ಮಾಡುವಂತಹವರಿಗೆ ಸರ್ಕಾರದಿಂದಲೇ ಪ್ರೋತ್ಸಾಹ ಸಿಗುತ್ತಾ ಇದೆಯೇನೋ ಎನ್ನುವಂಥ ಭಾವನೆ ಬರುತ್ತಿದೆ. ಹಾಗಾಗಿ ಹಗಲು ರಾತ್ರಿ ದರೋಡೆಯೇ ನಡೆಯುತ್ತಿದೆ. ಅರಣ್ಯದ ಲೂಟಿ ಆ ರೀತಿಯಲ್ಲಿ ಆಗುತ್ತಿದೆ. ಆ ಹಿನ್ನೆಲೆಯಲ್ಲಿ ಮಾನ್ಯ ಸಚಿವರು ಇದಕ್ಕೆ ವಿಶೇಷವಾಗಿ ಸ್ಪಂದಿಸಿ ಆಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ನನ್ನ ಹತ್ತಿರ ಈ ದಿವಸಕ್ಕೆ ಬರತಕ್ಕಂಥ ಶೂನ್ಯ ವೇಳೆ ವಿಷಯಗಳಲ್ಲಿ ಮಾನ್ಯ ಸದಸ್ಯರ ಶೂನ್ಯ ವೇಳೆ ವಿಷಯ ಇರಲಿಲ್ಲ. ಆದಕಾರಣ ನಾನು ತಯಾರಾಗಿಲ್ಲ. ಮೇಲಾಗಿ ಯಾವುದನ್ನೂ ಅವರು ಸ್ಪೆಸಿಫಿಕ್ ಆಗಿ ಹೇಳಲಿಲ್ಲ. ಅವರು ಯಾವ ಒಂದು ವಿಷಯದ ಬಗ್ಗೆ ಹೇಳಿದ್ದಾರೆ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಈ ಸದನ ಮುಗಿಯುವುದರೊಳಗೆ ಉತ್ತರ ಕೊಡುತ್ತೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ:- ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:- ನಾಳೆ ನಿಮಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನಲ್ಲಾ.

ಶ್ರೀ ಎ.ಆರ್.ಕೃಷ್ಣಮೂರ್ತಿ:- ಆಯಿತು.

ಅಧ್ಯಕ್ಷರು:- ಈಗ ಮೀನುಗಾರಿಕಾ ಇಲಾಖಾ ಮಂತ್ರಿಗಳಿಂದ ಉತ್ತರ.